**1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ,**
**ಚಿಕ್ಕಮಗಳೂರು**

**<u>ಸ್ಪೆಷಲ್ ಮೊಕದ್ದಮೆ ಸಂಖ್ಯೆಃ 87/2017</u>**

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ | ದಿವಾಕರ | ಪಿ.ಡಬ್ಲ್ಯೂ.2 |
| ತಂದೆಯ ಹೆಸರು | ಃ | ಶಿವಣ್ಣ | ಸಿ.ಡಬ್ಲ್ಯೂ.9 |
| ವಯಸ್ಸು | ಃ | 23 ವರ್ಷ | |
| ಉದ್ಯೋಗ | ಃ | ಕೂಲಿ ಕೆಲಸ | |
| ವಾಸಸ್ಥಳ | ಃ | ಕೆಸವಳಲು, ಮೂಡಿಗೆರೆ | |

ದಿಃ 29-01-2021 ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-</u>

1. ನನಗೆ ಚಾಸಾ.1 ರಿಂದ 3, 10 ರಿಂದ 15 ರವರ ಪರಿಚಯ ಇದೆ. ನನಗೆ ಆರೋಪಿ ಪ್ರತಾಪ್ ನ ಪರಿಚಯವು ಇದೆ. ಆರೋಪಿಯು ನಮ್ಮ ಪಕ್ಕದ ಊರಿನವರು. ನಾನು ಪರಿಶಿಷ್ಟ ಜಾತಿಗೆ ಸೇರಿದವನು. ಆರೋಪಿ ಪ್ರತಾಪ್ ಒಕ್ಕಲಿಗರ ಜಾತಿಗೆ ಸೇರಿದವನು. ನಾನು 2017 ನೇ ಇಸವಿಯಲ್ಲಿ ಮೂಡಿಗೆರೆಯ ಡಿ.ಎಸ್.ಬಿ.ಜಿ. ಕಾಲೇಜಿನಲ್ಲಿ ಪ್ರಥಮ ವರ್ಷದ ಪದವಿ ವಿದ್ಯಾಭ್ಯಾಸ ಮಾಡುತ್ತಿದ್ದೆ.

2. ದಿಃ 05-04-2017 ರಂದು ನಾನು ಕಾಲೇಜಿಗೆ ಹೋಗುವ ಸಲುವಾಗಿ ಚಾಸಾ.1 ಶಶಿಕುಮಾರರವರ ಆಟೋದಲ್ಲಿ ಬೆಳಗ್ಗೆ 9.30 ರ ವೇಳೆಗೆ ಕುಳಿತುಕೊಂಡು ಹೋಗುತ್ತಿದ್ದೆ. ಹೇಮಾವತಿ ನಗರದ ಹತ್ತಿರ ಒಂದು ವಾಹನ ಬಂದು

ಆಟೋಗೆ ಹಿಂದಿನಿಂದ ಗುದ್ದಿರುತ್ತದೆ. ಆಗ ಆಟೋ ಚಾಲಕ ಶಶಿಕುಮಾರರವರು ಆಟೋವನ್ನು ಸೈಡಿಗೆ ನಿಲ್ಲಿಸಿ ಏನಾಯಿತು ಎಂದು ನೋಡಬೇಕಾದರೆ ಕಪ್ಪು ಬಣ್ಣದ ಸಾಂಟ್ರೋ ಕಾರಿನಲ್ಲಿ ಪ್ರತಾಪ್ ರವರು ಇದ್ದರು. ಅವರೇ ಆಟೋಗೆ ಗುದ್ದಿರುತ್ತಾರೆ. ಪ್ರತಾಪ್ ರವರು ಇಳಿದು ಬಂದು ಶಶಿಕುಮಾರರವರ ಕೊರಳಪಟ್ಟಿ ಹಿಡಿದು ಕೆನ್ನೆಗೆ, ಮುಖಕ್ಕೆ ಹೊಡೆದಿರುತ್ತಾರೆ. ನಂತರ "ಹೊಲೆಯ ಸೂಳೆಮಕ್ಕಳೇ ನೀವು ತೋಟದಲ್ಲಿ ಗೇಯುವುದು ಬಿಟ್ಟುಕೊಂಡು ಆಟೋ ಏಕೆ ಓಡಿಸುತ್ತೀರಾ" ಎಂದು ಹೇಳಿ ಶಶಿಕುಮಾರರವರಿಗೆ ಹೊಡೆದಿರುತ್ತಾರೆ. ನಂತರ ನಾನು ಮತ್ತು ನಮ್ಮ ಊರಿನ ರಾಕೇಶ ಇಬ್ಬರು ಅಣ್ಣ ನಿಮ್ಮದೇ ತಪ್ಪು ಇಟ್ಟುಕೊಂಡು ಹೊಡೆಯುತ್ತಿದ್ದೀರಲ್ಲಾ ಎಂದು ಪ್ರತಾಪ್ ನನ್ನು ಕೇಳಿರುತ್ತೇವೆ. ಆಗ ಪ್ರತಾಪ್ ರವರು ನನ್ನ ಕೈಯನ್ನು ತಿರುಚಿ ಹಲ್ಲೆ ಮಾಡಿರುತ್ತಾರೆ. ನಂತರ ಅಲ್ಲೇ ಬಿದ್ದಿದ್ದ ಒಂದು ಕಲ್ಲಿನಿಂದ ನನ್ನ ಕಾಲಿಗೆ ಚಚ್ಚಿರುತ್ತಾರೆ. ಸದರಿ ಕಲ್ಲನ್ನು ಈಗ ನ್ಯಾಯಾಲಯದ ಮುಂದೆ ನೋಡುತ್ತಿದ್ದೇನೆ. *(ಸಾಕ್ಷಿಯು ಮು.ಮಾ.1 ಕಲ್ಲನ್ನು ನೋಡಿ ಗುರುತಿಸಿರುತ್ತಾರೆ).*

*3.* ನಂತರ ನಮಗೂ ಕೂಡ "ಹೊಲಿಯ ಸೂಳೆಮಕ್ಕಳೇ ನೀವು ತೋಟದಲ್ಲಿ ಗೇಯಲು ಮಾತ್ರ ಲಾಯಕ್ಕು ಇನ್ನೂ ಮುಂದೆ ನನ್ನ ಕಣ್ಣ ಮುಂದೆ ಕಾಣಿಸಿಕೊಂಡರೆ ನಿಮ್ಮನ್ನು ಸಾಯಿಸಿ ಬಿಡುತ್ತೇನೆ" ಎಂದು ಬೆದರಿಕೆ ಹಾಕಿರುತ್ತಾರೆ. ಆ ಸಮಯದಲ್ಲಿ ಅಲ್ಲಿಗೆ ಕೆಲವು ಜನರು ಬಂದಿರುತ್ತಾರೆ. ಆಗ ಪ್ರತಾಪ್ ಕಾರು ಸ್ಟಾರ್ಟ್ ಮಾಡಿಕೊಂಡು ಹೊರಟು ಹೋಗಿರುತ್ತಾರೆ.

*4.* ನಮಗೆ ತೀವ್ರ ರಕ್ತಸ್ರಾವ ಆಗುತ್ತಿದ್ದು ಅಲ್ಲಿಗೆ ಬರುತ್ತಿದ್ದ ಯಾವುದೋ ಒಂದು ಆಟೋದಲ್ಲಿ ನನ್ನನ್ನು, ಶಶಿಕುಮಾರ ಮತ್ತು ರಾಕೇಶರವರನ್ನು ಮೂಡಿಗೆರೆಯ ಎಂ.ಜಿ.ಎಂ. ಆಸ್ಪತ್ರೆಗೆ ಚಿಕಿತ್ಸೆಗೆ ಕರೆದಕೊಂಡು ಹೋಗಿರುತ್ತಾರೆ. ರಾಕೇಶರವರನ್ನು ಗೋಪಾಲ ಎನ್ನುವ ಹೆಸರಿನಿಂದಲೂ ಸಹ ಕರೆಯುತ್ತಾರೆ. ಈ ಎಲ್ಲಾ ವಿಷಯಗಳ ಬಗ್ಗೆ ನಾನು ದಿಃ *06-04-2017* ರಂದು ಡಿ.ವೈ.ಎಸ್.ಪಿ. ರವರಿಗೆ ನನ್ನ ಹೇಳಿಕೆ ನೀಡಿರುತ್ತೇನೆ.

*5.* ನಾನು ಪ್ರಯಾಣ ಮಾಡುತ್ತಿದ್ದ ಆಟೋವನ್ನು ಹಾಗೂ ಆರೋಪಿ ಪ್ರತಾಪನ ಕಾರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಗೆ ನಿಶಾನೆ ಪಿ.*8* ರಿಂದ ಪಿ.*13* ಫೋಟೋಗಳನ್ನು ತೋರಿಸಿದ್ದು ಅವರು ಸದರಿ ಫೋಟೋಗಳನ್ನು ನೋಡಿ ಅವುಗಳಲ್ಲಿ ಕಂಡುಬರುವ ಆಟೋದಲ್ಲೇ ಪ್ರಯಾಣ ಮಾಡುತ್ತಿದುದ್ದಾಗಿ ಗುರುತಿಸಿರುತ್ತಾರೆ. ಹಾಗೂ ಸಾಕ್ಷಿಗೆ ನಿಶಾನೆ ಪಿ.*14* ರಿಂದ ಪಿ.*17* ಫೋಟೋಗಳನ್ನು ತೋರಿಸಿದ್ದು ಅವರು ಸದರಿ ಫೋಟೋಗಳನ್ನು ನೋಡಿ ಅವುಗಳಲ್ಲಿ ಕಂಡುಬರುವ ಸಾಂಟ್ರೋ ಕಾರಿನಲ್ಲೇ ಆರೋಪಿ ಪ್ರತಾಪ ಅಪಘಾತ ಮಾಡಿರುವುದಾಗಿ ಗುರುತಿಸಿರುತ್ತಾರೆ.

*6.* ನಾನು ಆರೋಪಿ ಪ್ರತಾಪನನ್ನು ನೋಡಿದರೆ ಗುರುತಿಸುತ್ತೇನೆ. ಅವರು ಈ ದಿನ ಗೈರು ಹಾಜರಿದ್ದು ಅವರನ್ನು ಗುರುತಿಸಿಕೊಳ್ಳಲು ತಕರಾರು ಇಲ್ಲ ಎಂದು ಅವರ ಪರ ವಕೀಲರು ತಿಳಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿಯ ಪರವಾಗಿ ಶ್ರೀ ಹೆಚ್.ಎ.ಟಿ. ವಕೀಲರಿಂದಃ**

(ಶ್ರೀ ಹೆಚ್.ಎ.ಟಿ. ವಕೀಲರು ಆರೋಪಿಯು ಕೋವಿಡ್ ಸಾಂಕ್ರಾಮಿಕಕ್ಕೆ ಮೊದಲು ನಿರಂತರವಾಗಿ ತಮ್ಮ ಸಂಪರ್ಕದಲ್ಲಿ ಇದ್ದು ಸಾಂಕ್ರಾಮಿಕ ಆರಂಭವಾದ ನಂತರ ಆರೋಪಿಯು ಸಂಪರ್ಕಕ್ಕೆ ಸಿಗುತ್ತಿಲ್ಲ ಎಂದು ಮನವಿ ಮಾಡಿರುತ್ತಾರೆ. ಹಾಗೂ ಆರೋಪಿಯ ಸಂಪರ್ಕವಿಲ್ಲದ ಕಾರಣ ತಮಗೆ ಸಾಕ್ಷಿಯ ಪಾಟೀ ಸವಾಲು ಮಾಡಲು ಸೂಕ್ತ ನಿರ್ದೇಶನ ದೊರಕುತ್ತಿಲ್ಲ ಎಂದು ಹೀಗಾಗಿ ಪ್ರಕರಣವನ್ನು ಮುಂದೂಡಲು ಮನವಿ ಮಾಡಿರುತ್ತಾರೆ. ಸದರಿ ಕೋರಿಕೆ ಸಮಂಜಸ ಎಂದು ಕಂಡು ಬಂದ ಕಾರಣ ಸಾಕ್ಷಿಗೆ ಖರ್ಚು ನೀಡುವ ನಿಬಂಧನೆ ಮೇರೆಗೆ ಪ್ರಕರಣವನ್ನು ಪಾಟೀ ಸವಾಲಿಗೆ ಮುಂದೂಡಿದೆ).

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸ ಇ ಎ ಒ
ಸಹಿ/-

(ಕೆ.ಎಲ್.ಅಶೋಕ್)
*1* ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ರೂ.